International Journal of Academic Research
ISSN: 2348-7666; Vol.5, Issue-4, April, 2018
Impact Factor: 6.023; Email: drtvramana@yahoo.co.in

ಡಾ. ರೂಪ ಎಂ.ಪಿ.
ಕನ್ನಡ ಸಹಾಯಕ ಪ್ರಾಧ್ಯಾಪಕರು.
ಸ.ಪ್ರ.ದ.ಮಹಿಳಾ ಕಾಲೇಜು, ರಾಮನಗರ.
ಮೊಬೈಲ್ ನಂ.9740077209.
ಈ ಮೇಲ್; roopaharushi@gmail.com.

# ಗೊರೂರರ ಕಾದಂಬರಿಗಳಲ್ಲಿ ಅಭಿವ್ಯಕ್ತಿಗೊಂಡಿರುವ ವೈವಾಹಿಕತೆ

## (ಊರ್ವಶಿ ಮತ್ತು ಹೇಮಾವತಿ ಕಾದಂಬರಿಗಳನ್ನು ಅನುಲಕ್ಷಿಸಿ)

ಹೇಮಾವತಿ ಮತ್ತು ಊರ್ವಶಿ ಕಾದಂಬರಿಗಳೆರಡರಲ್ಲಿಯೂ ತಿಳಿದು ಬರುವಂತೆ ವೈದಿಕ ಮನೆಗಳಲ್ಲಿ ಹೆಣ್ಣುಗಳನ್ನು ಹತ್ತು ಹನ್ನೆರಡು ವರುಷವಿರುವಾಗಲೇ ಮದುವೆ ಮಾಡಿಬಿಡಬೇಕಿತ್ತು. ಇಲ್ಲದಿದ್ದರೆ ಊರವರ ನಿಂದನೆಗೆ ಗುರಿಯಾಗಬೇಕಾಗಿತ್ತು. ಹಳ್ಳಿಗಳಲ್ಲಿ ಈ ಒತ್ತಡ ಹೆಚ್ಚಾಗಿಯೇ ಇತ್ತು. ವಿವಾಹವಾಗುವ ಹುಡುಗಿಯರು ಸಂಗೀತವನ್ನು ಕಲಿಯುವುದು ರೂಢಿಯಲ್ಲಿತ್ತು. ಗಂಡನನ್ನು ಆಕರ್ಷಿಸಲು ಮದುವೆಯಾಗುವ ಹೆಣ್ಣಿಗೆ ಸಂಗೀತದ ಅಭಿರುಚಿಯಿರಬೇಕಿತ್ತು. ಮದುವೆಯಾಗುವ ವರನಿಗೆ ಸಂಗೀತದ ಬಗ್ಗೆ ಆಸಕ್ತಿಯಿರಲಿ ಇಲ್ಲದಿರಲಿ ಆದರೆ ಹೆಣ್ಣುಮಕ್ಕಳು ಮಾತ್ರ ಮದುವೆಯ ವೇಳೆಗೆ ಹಸೆಮಣೆಯ ಮೇಲೆ ಹಾಡಲು ಸಂಗೀತ ಕಲಿಯುವುದು ಅನಿವಾರ್ಯವಾಗಿತ್ತು. ಮದುವೆಯಾಗುವ ವರನನ್ನು ಸೆಳೆದುಕೊಳ್ಳುವ ತಂತ್ರವಾಗಿಯೂ ಆಗ ಇದು ಆಚರಣೆಯಲ್ಲಿತ್ತು.

**ವರದಕ್ಷಿಣೆ :** ಮದುವೆ ಮಾಡಿಕೊಡುವಾಗ ವರದಕ್ಷಿಣೆ ವರೋಪಚಾರಗಳು ಕೂಡ ತುಂಬಾ ಗಂಭೀರವಾಗಿದ್ದವು. ಹೇಮಾವತಿಯನ್ನು ಮದುವೆ ಮಾಡಲು ನಿಂತಾಗ ರಾಮಣ್ಣ ಪೆರುಮಾಳರು ತಮ್ಮ ಮನೆಯ ಪಕ್ಕದಲ್ಲಿದ್ದ ಸುಬ್ಬಾಭಟ್ಟರನ್ನು ತಮ್ಮ ಮಗಳಿಗೆ ಒಳ್ಳೆಯ ಗಂಡು ಹುಡುಕಿಕೊಡಲು ಹೇಳಿದಾಗ ತಮ್ಮ ಮಗ ವಾಸು ಹೇಮಾವತಿಯನ್ನು ಇಷ್ಟಪಟ್ಟಿದ್ದರೂ ದುರಾಸೆಯಿಂದ ಸ್ವಾರ್ಥಿಯಾದ ಸುಬ್ಬಾಭಟ್ಟ ರಾಮಣ್ಣ ಪೆರುಮಾಳರ ಆಸ್ತಿ ಹೊಡೆಯಲು ಶಠಾರಿಯವರ ಮಗ ಸುಂದರನೊಂದಿಗೆ ವಿವಾಹ ಏರ್ಪಡಿಸಿದಾಗ ಶಠಾರಿ ಕುಟುಂಬದವರು ಮದುವೆಯನ್ನು ವೈಭವದಿಂದ ನಡೆಸಿಕೊಡಲು ಹೇಳುತ್ತಾರೆ. ಆ ಸಂದರ್ಭದಲ್ಲಿ ವರದಕ್ಷಿಣೆಯನ್ನು ವಿಪರೀತವಾಗಿ ಕೇಳುತ್ತಾರೆ.

'ಹೆಣ್ಣು' ಆಸ್ತಿ ಕಬಳಿಕೆಗಾಗಿ ಇರುವ ಒಂದು ವಸ್ತುವಿನಂತೆ ಗಂಡಿನ ಕಡೆಯವರು ಭಾವಿಸುತ್ತಾರೆ. ಸೀತಮ್ಮನವರು ವರದಕ್ಷಿಣೆಯ ವಿಚಾರವಾಗಿ ಮಾತನಾಡುತ್ತ,

"ಇನ್ನೇನು ನಿಮ್ಮ ಆಸ್ತಿಯೆಲ್ಲ ಮಗಳಿಗೆಯೇ ಹೀಗೆ ಕೊಟ್ಟರೂ ಒಂದೇ ಹಾಗೆ ಕೊಟ್ಟರೂ ಒಂದೇ" (ಪುಟ 111, ಹೇಮಾವತಿ)

ಎಂದು ಹೇಳಿ ಅವರಿಂದ ಹಣವನ್ನು ವಸೂಲಿ ಮಾಡುತ್ತಾರೆ. ಪೆರುಮಾಳರು ಅನ್ಯದಾರಿಯಿಲ್ಲದೆ ಮಗಳು ಈ ಮನೆಯಿಂದ ಒಳ್ಳೆಯ ಮನೆಯನ್ನು ಸೇರಿದರೆ ಸಾಕೆಂದು ತಮ್ಮ ಆಸ್ತಿಯನ್ನೆಲ್ಲ ಮಾರಿ ವರದಕ್ಷಿಣೆ ನೀಡುತ್ತಾರೆ. ಮದುವೆಯಾಗುವ ದಿನ ಮತ್ತೆ ಎರಡು ಸಾವಿರ ಬೇಕೆಂದು ಗಂಡಿನ ಕಡೆಯವರು ಹಠ ಮಾಡಿದಾಗ ವಿಷಯ ತಿಳಿದ ಹೇಮಾವತಿ ಈಗಾಗಲೇ ನಾಲ್ಕು

ಸಾವಿರ ಹಣವನ್ನು ವರದಕ್ಷಿಣೆಯಾಗಿ ಪಡೆದಿದ್ದರೂ ಮತ್ತೆ ಹಣವನ್ನು ಕೇಳುತ್ತಿದ್ದಾರಲ್ಲ ಎಂದು ಚಿಂತಿಸುತ್ತಾಳೆ.

"ಅಪ್ಪಾ ರೂಪಾಯಿ ಹೋದರೆ ಹೋಗಲಿ. ಇದನ್ನು ಇಲ್ಲಿಗೆ ಬಿಟ್ಟು ಬಿಡೋಣ ಮತ್ತೆ ಹೋಗುವುದೇ ಬೇಡ. ನನಗೆ ಯಾಕೋ ಭಯವಾಗುತ್ತಿದೆ. ಎಲ್ಲಾ ಗೊತ್ತಾಗಿ ಲಗ್ನ ಪತ್ರಿಕೆಯೂ ಆದ ಮೇಲೆ ಅವರು ಮತ್ತೆ ಹೀಗೆ ಬರೆದಿರುವುದರಿಂದ ಅವರು ಯಾವುದಕ್ಕೂ ಹೇಸುವುದಿಲ್ಲ" (ಪುಟ 115, ಹೇಮಾವತಿ)

ಹೇಮಾವತಿ ಗಂಡಿನ ಮನೆಯವರ ಹಣದಾಹವನ್ನು ತಿಳಿದು ಹೆದರುತ್ತಾಳೆ. ಇಂತಹ ಮನೆಗಳಿಗೆ ಮದುವೆಯಾಗಿ ಹೋಗುವುದಕ್ಕಿಂತ ತವರು ಮನೆಯಲ್ಲಿ ಉಳಿಯುವುದೇ ಉಚಿತವೆನಿಸುತ್ತದೆ ಎಂದೆನಿಸಿದರೂ ಈ ಸಮಾಜ ಒಪ್ಪುವುದಿಲ್ಲ. 'ವಿವಾಹ' ದ ನೆಪದಲ್ಲಿ ಹೆಣ್ಣಿನ ಮನೆಯವರನ್ನು ಶೋಷಿಸಲಾಗುತ್ತದೆ.

ಎಷ್ಟೇ ಬಡವರಾದರೂ ಸಹ ವರದಕ್ಷಿಣೆಯಿಲ್ಲದೆ ಯಾರೂ ಕೂಡ ಮದುವೆಯಾಗಲೂ ಒಪ್ಪುತ್ತಿರಲಿಲ್ಲ. ಊರ್ವಶಿ ಕಾದಂಬರಿಯಲ್ಲಿ ಜಲಜಾಕ್ಷಿಯನ್ನು ನೋಡಲು ಬರುವ ಗಂಡುಗಳು ಮನೆಯ ಬಡತನವನ್ನು ಕಂಡು "ದಾರಿದ್ರ್ಯವನ್ನು ಲಗ್ನವಾಗಲು ನಾವು ಬಂದಿಲ್ಲ" ಎಂದು ಮುಖ ಗಂಟು ಹಾಕಿಕೊಂಡು ಹೊರಟು ಹೋಗುತ್ತಿದ್ದರು." (ಪುಟ 3, ಊರ್ವಶಿ)

ಸೀತಾಲಕ್ಷ್ಮಿ ನೋಡಲು ಸುಂದರವಾಗಿದ್ದರೂ ಸಹ ವರದಕ್ಷಿಣೆ ನೀಡಲಾರರೆಂಬ ಕಾರಣಕ್ಕಾಗಿ ಬಂದವರೆಲ್ಲ ಹಿಂದಿರುಗುತ್ತಿದ್ದರು.

"ಜಲಜಾಕ್ಷಿಗೆ ಮದುವೆಯಾದ ನಂತರದ ಐದೂ ವರ್ಷಗಳೂ ರಾಮನು ಶ್ರೀನಿವಾಸನೂ ಸೀತಾಲಕ್ಷ್ಮಿಗೆ ಗಂಡನನ್ನು ಹುಡುಕಿ ಹುಡುಕಿ ಬಳಲಿದರು. ಆದರೆ ಹೆಣ್ಣು ಚೆಲುವೆಯಾಗಿದ್ದ ಮಾತ್ರಕ್ಕೆ ಮದುವೆಯಾಗಿ ಬಿಡುವುದೇ? ಜಲಜಾಕ್ಷಿಯ ವಿವಾಹದಲ್ಲಿ ಇಟ್ಟ ಡಿಮ್ಯಾಂಡು ಪಟ್ಟಿಗಿಂತಲೂ ಸೀತಾಲಕ್ಷ್ಮಿಯ ವಿವಾಹದ ವೇಳೆಗೆ ವರಗಳ ಕೇಳಿಕೆ ಒಂದಕ್ಕೆ ಎರಡಾಯಿತು. ಅರಳಿ ನೋಟದಂತಹ ಹೆಣ್ಣು, ಕುಡಿ ಹುಬ್ಬು ಕಾಡಿಗೆ ಕಣ್ಣು, ತುಟಿ ಹವಳದ ಕುಡಿ, ಭಂಗಾರದ ವಸ್ತು ಸಿಂಗಾರ ಮಾಡಿ ಇಟ್ಟಾರ ಬೆಂಕಿಯ ಕುಡಿ" ಯಾಗಿದ್ದ ಸೀತಾಲಕ್ಷ್ಮಿಯನ್ನು ನೋಡಿ ವರಗಳು "ದಮ್ಮಯ್ಯ, ಕೊಟ್ಟರೆ ಸಾಕು ಮದುವೆಯಾಗುತ್ತೇವೆ" ಎಂದು ಮನಸ್ಸಿನಲ್ಲಿ ಹೇಳಿಕೊಂಡರೂ ವರದಕ್ಷಿಣೆಯನ್ನು ವರೋಪಚಾರವನ್ನು ಗಿಟ್ಟಿಸಬೇಕೆಂದಿದ್ದ ಹಿರಿಯರನ್ನು ಎದುರಿಸುವ ಶಕ್ತಿಯಿಲ್ಲದವರಾಗಿ 'ದರಿದ್ರಾಣಾಂ ಮನೋರಥಃ" ಎಂಬಂತೆ ಹಿಂದಿರುಗುತ್ತಿದ್ದರು." (ಪುಟ 4, ಊರ್ವಶಿ)

ಹೀಗೆ ಹೆಣ್ಣುಗಳು ಹೇಮಾವತಿ, ಸೀತಾಲಕ್ಷ್ಮಿಯರಂತೆ ಅಪ್ರತಿಮ ಸುಂದರಿಯರಾಗಿರಲಿ ಅಥವಾ ಜಲಜಾಕ್ಷಿಯಂತೆ ಸಾಮಾನ್ಯ ರೂಪಿನವರಾಗಿರಲಿ ಹೇಗಿದ್ದರೂ ಸಹ ಹೆಣ್ಣು ಮಕ್ಕಳನ್ನು ಮದುವೆ ಮಾಡುವುದೆಂದರೆ ತಂದೆ ತಾಯಿಯರಿಗೆ ಅದೊಂದು ಭಯಂಕರ ಯಾತನಾಮಯ ಸನ್ನಿವೇಶಕ್ಕೆ ದೂಡುತ್ತಿತ್ತು.

**ಅಂತರ್ಜಾತಿ ವಿವಾಹ:** ಭಾರತೀಯ ಸಮಾಜದಲ್ಲಿ ನಾಲ್ಕು ವರ್ಣಗಳಿದ್ದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂದು ಗುರುತಿಸಲಾಗುತ್ತದೆ. ಇಲ್ಲಿ ಬ್ರಾಹ್ಮಣರು ಮೇಲುಸ್ತರದಲ್ಲಿದ್ದು ಸಮಾಜದಲ್ಲಿ

ಉನ್ನತ ಸ್ಥಾನಮಾನ ಪಡೆದವರಾಗಿದ್ದರು. ಎಲ್ಲಕ್ಕಿಂತ ಕೆಳಸ್ತರದಲ್ಲಿರುವ ಶೂದ್ರರು ಅಸ್ಪೃಶ್ಯರೆಂದು ಪರಿಗಣಿಸಲ್ಪಡುತ್ತಿದ್ದರು. ಇವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣದವರ ಬಳಿ ಜೀತ ಮಾಡಿಕೊಂಡು ಜೀವನ ನಡೆಸಬೇಕಿತ್ತು. ಇವರು ಸೌಲಭ್ಯಗಳಿಂದ ವಂಚಿತರಾಗಿದ್ದು ಇವರಿಗೆ ಸ್ವಂತ ಅಸ್ತಿತ್ವವೆಂಬುದಿರಲಿಲ್ಲ

ಇವರು ಮೇಲ್ವರ್ಗದವರ ಶೋಷಣೆಗೆ ಒಳಗಾಗುತ್ತಿದ್ದರು. ಈ ಜಾತಿ ತಾರತಮ್ಯವನ್ನು ಹೋಗಲಾಡಿಸಲು 20ನೇ ಶತಮಾನದ ಆರಂಭದ ದಶಕಗಳಲ್ಲಿ ಹಲವು ಸಮಾಜ ಸುಧಾರಕರು ಭಾರತದಾದ್ಯಂತ ಪ್ರಯತ್ನಿಸುತ್ತಿದ್ದರು. ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ ಮಾಡುತ್ತಿದ್ದರು.

ಕಾವೇರಿ ಅಗ್ರಹಾರದಲ್ಲಿ ಉನ್ನತ ಸ್ಥಾನದಲ್ಲಿರುವ ಬ್ರಾಹ್ಮಣ ಸಮುದಾಯಗಳ, ಸ್ಥಿತಿವಂತ ಒಕ್ಕಲಿಗರ ನಿರ್ದೇಶನದಂತೆ ಹರಿಜನರು ಅವರ ಮನೆಗಳಲ್ಲಿ ಹೊಲಗದ್ದೆಗಳಲ್ಲಿ ಜೀತದಾಳುಗಳಾಗಿ ದುಡಿಯುತ್ತಿದ್ದರು. ಈ ಎರಡೂ ಸಮುದಾಯಗಳ ನಡುವಿನ ಮೇಲು ಕೀಳುಗಳು ಕಟ್ಟುನಿಟ್ಟಾಗಿದ್ದವು. ಈ ಜನರ ನಡುವಿನ ತಾರತಮ್ಯಗಳು ದೂರವಾಗಬೇಕೆಂದರೆ ಅವರಿಬ್ಬರೂ ಒಂದಾಗಬೇಕು. ಅವರಿಬ್ಬರೂ ಒಂದಾಗಬೇಕಾದರೆ ಅವರನ್ನು ಬೆಸೆಯುವ ಸಾಧನವೆಂದರೆ ಅದು ಅಂತರ್ಜಾತಿ ವಿವಾಹದಿಂದ ಮಾತ್ರ ಸಾಧ್ಯ. ಬ್ರಾಹ್ಮಣರು ಮತ್ತು ಹೊಲೆಯರ ನಡುವೆ ವಿವಾಹ ಏರ್ಪಡಬೇಕು ಎಂಬುದನ್ನು ಈ ಕಾದಂಬರಿ ಸೂಚಿಸುತ್ತದೆ.

ಜಾತಿಯಲ್ಲಿ ಕೆಳಸ್ತರದಲ್ಲಿರುವ ಕಾಳನ ಮಗಳು ಚೆನ್ನಿಯನ್ನು ಆನಂದ ಪೆರುಮಾಳನು ಅವಳಲ್ಲಿರುವ ಗಾನವಿದ್ಯೆಯನ್ನು ಕಂಡು ಅವಳ ಪ್ರತಿಭೆಯನ್ನು ಉತ್ತುಂಗಕ್ಕೆ ತರಬೇಕೆಂದು ಅವಳನ್ನು ಕರೆದುಕೊಂಡು ಅಗ್ರಹಾರವನ್ನೇ ಬಿಟ್ಟು ಹೊರಟುಹೋಗುತ್ತಾನೆ. ಜಾತಿಯಲ್ಲಿ ಹೊಲೆಯಳಾದರೂ ಅವಳ ಗಾನ ಪ್ರತಿಭೆ ಉನ್ನತ ಮಟ್ಟದ್ದು ಎಂದರಿತ ಆನಂದ ಪ್ರತಿಭೆಗೆ ಜಾತಿಮತಗಳ ಸೋಂಕಿಲ್ಲವೆಂದು ತಿಳಿದು ಊರವರಿಂದ ಬಹಿಷ್ಕೃತನಾದರೂ ಎದೆಗುಂದದೆ ಅವಳಿಗೆ ತನ್ನ ಗಾನವಿದ್ಯೆಯನ್ನು ಧಾರೆಯೆರೆಯುತ್ತಾನೆ. ಅವಳನ್ನು ಅಭಿನಯ ಗಾನ ಶಾರದೆಯನ್ನಾಗಿ ರೂಪಿಸುತ್ತಾನೆ. ಅಭಿನಯಗಾನ ಶಾರದೆಯಲ್ಲಿರುವ ಗಾನವಿದ್ವತ್ತು ಮತ್ತು ಅವಳ ಅಪ್ರತಿಮ ಸೌಂದರ್ಯಗಳು ಜನರ ಗಮನ ಸೆಳೆಯುತ್ತವೆ. ಅಗ್ರಹಾರದ ಸುಬ್ಬಾಭಟ್ಟರ ಮಗ ಅವಳ ಗಾನಕ್ಕೆ ಮೋಹಕ ರೂಪಿಗೆ ಮರಳಾಗಿ ಅವಳನ್ನು ವಿವಾಹವಾಗಲು ಮುಂದಾಗುತ್ತಾನೆ. ಆದರೆ ಅವಳು 'ಹೊಲತಿ' ಎಂಬುದು ತಿಳಿದಾಗಲೂ ಅವನ ಮನಸ್ಸು ವಿಚಲಿತವಾಗುವುದಿಲ್ಲ. ಆ ಸುದ್ದಿಯನ್ನು ತಿಳಿಸಿದ ಆನಂದನಿಗೆ ಅವನು ಕೊಡುವ ಉತ್ತರ ಹೀಗಿದೆ.

"ಮಹಾಶಯ, ಗಾನಶಾರದೆ ಹರಿಜನವಾದರೂ ಆಗಲಿ, ಶಿವಜನವಾದರೂ ಆಗಲಿ, ಇವಳ ವಿಷಯದಲ್ಲಿ ನನಗೆ ಯಾವ ಗೌರವ ಭಾವನೆ ಇದ್ದಿತೋ ಎಂದೆಂದಿಗೂ ಅದೇ ಇರುತ್ತದೆ. ಈ ನನ್ನ ಅರಿಕೆಯನ್ನು ನೀವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡಿರಬೇಕು." (ಪುಟ 273, ಹೇಮಾವತಿ)

ವಾಸುವು ಗಾನಶಾರದೆಯನ್ನು ಇಷ್ಟಪಡುತ್ತಿರುವುದು ಅವಳನ್ನೇ ಮದುವೆಯಾಗುವುದಾಗಿ ಹಠ ಹಿಡಿದಿರುವುದು ಸುಬ್ಬಾಭಟ್ಟರಿಗೆ ಇಷ್ಟವಾಗಲಿಲ್ಲ. ಮಗನ ಈ ವರ್ತನೆಯನ್ನು ಖಂಡಿಸಿ ಅವನಿಗೆ ಪರಿಪರಿಯಾಗಿ ಬುದ್ಧಿ ಹೇಳಲು ತೊಡಗಿದರು. ಆದರೆ ವಾಸುವಿನ ಧೃಡ ನಿರ್ಧಾರದ ಮುಂದೆ

ಸುಬ್ಬಾಭಟ್ಟರು ಸೋಲಬೇಕಾಯಿತು. ವಾಸು ಹೊಲತಿಯನ್ನು ಮದುವೆಯಾಗುತ್ತಿರುವುದನ್ನು ಕಲ್ಪಿಸಿಕೊಂಡ ಸುಬ್ಬಾಭಟ್ಟರಿಗೆ ಮಾನಸಿಕ ಆಘಾತವಾಗಿ ಈ ರೀತಿ ಕನವರಿಸುತ್ತಾರೆ.

"ಹೊಲೆಯರ ಕಾಳ ನನ್ನ ಬೀಗ. ಭೇಷ್ ಭೇಷ್! ಆದರೆ ಈಗ ಕಾಳ ಇಲ್ಲ. ನನ್ನ ಮನೆಯ ಸತ್ತ ದನಗಳನ್ನೆಲ್ಲಾ ತಿಂದವನು ಕಾಳನೇ. ಈ ಗಾನಶಾರದೆಯೂ ತಿಂದಿರಬೇಕು. ಇವಳನ್ನು ಮದುವೆಯಾಗುವವನು 'ಕಶ್ಯಪ ಕಾಶ್ಯಪ ನಿದ್ರಪ ನೈದ್ರ್ಯ ರೇಪ ರೇಪ ಸಪ್ತಾರುಷಯಾ' ಪ್ರವರಾನ್ವಿತನಾದ ಅಗ್ರಹಾರದ ಪುರೋಹಿತ ಸುಬ್ಬಾಭಟ್ಟರ ಮಗ ವಾಸು. ಹೌದು, ವಾಸುವಿಗೇನೋ ಕೌಶಿಕ ಗೋತ್ರ ಪ್ರವರ ಹೇಳುತ್ತೀರಿ. ಆದರೆ ಗಾನ' ಶಾರದೆಗೆ ಯಾವ ಪ್ರವರ ಹೇಳುತ್ತೀರಿ. ಕಾಳನಿಗೆ ಮೂಲ ಪುರುಷರಾದ ಋಷಿಗಳಾರು? ಕಾಳನ ಅಪ್ಪ ಕಾಳ, ಅವನಪ್ಪ ಕಾಳ, ಅವನಪ್ಪ ಕಾಳ; ಸಮಾಜ ಸುಧಾರಣೆಯಂತೆ ಸುಧಾರಣೆ! ಎಲೋ ವಾಸು! ನಿನಗೆ ನಿಜವಾಗಿ ಸುಧಾರಣೆ ಬೇಕಾದರೆ ಇದೇ ಅಗ್ರಹಾರದಲ್ಲಿರುವ ಇನ್ನೊಬ್ಬ ಹೊಲತಿಯನ್ನು ಮದುವೆಯಾಗು ನೋಡೋಣ. ನಿನಗೆ ಬೇಕಾದುದು ಸುಧಾರಣೆಯೂ ಅಲ್ಲ, ಹೊಲತಿಯೂ ಅಲ್ಲ, ನಿನಗೆ ಬೇಕಾದುದು ಅವಳ ರೂಪ, ಯೌವನ, ಲಾವಣ್ಯ, ಸಂಗೀತ. . . . ಹೌದು, ಹೀಗಾಗುತ್ತೆ ಎಂದು ನನಗೆ ಮೊದಲೇ ತಿಳಿಯಬೇಕಾಗಿತ್ತು. ಹೇಮಾವತಿಯನ್ನು ಮದುವೆಯಾಗುತ್ತೇನೆ ಅಂದ. ನಾವು ಬ್ರಾಹ್ಮಣರು ಅವರು ಐಯ್ಯಂಗಾರ್ರು ಬೇಡ ಎಂದೆ. ಈಗ ಹೊಲತಿಯನ್ನು ಮದುವೆಯಾಗುತ್ತೇನೆ ಎಂದ. ಕಲಿಯುಗ ಪ್ರಾರಂಭವಾಗಿದೆ, ಆದ್ದರಿಂದಲೇ ಹೀಗೆ ವರ್ಣಸಂಕರ ಹೌದು ಆದರೆ ಇವಳು ನಮ್ಮೂರ ಹೊಲತಿಯಲ್ಲ. . . ." (ಪುಟ 277, ಹೇಮಾವತಿ)

ಶಿಕ್ಷಣ ಪಡೆದ ಯುವಕರು ಜಾತಿ ಜಾತಿಗಳ ನಡುವಿನ ತಾರತಮ್ಯಗಳ ಭೇದವೆಣಿಸದೆ ವಿವಾಹದ ಮೂಲಕ ಏಕತೆಯನ್ನು ಸಾಧಿಸಬಹುದು ಎಂಬುದನ್ನು ಇಲ್ಲಿ ವಾಸು ಮತ್ತು ಗಾನಶಾರದೆಯರು ತಮ್ಮ ಮದುವೆಯ ಮೂಲಕ ಸಂದೇಶ ಸಾರುತ್ತಾರೆ.

**ಮರು ವಿವಾಹ :** ಸಾಮಾನ್ಯವಾಗಿ ಬ್ರಾಹ್ಮಣ ಕುಟುಂಬಗಳಲ್ಲಿ ಪುರುಷರು ಮರು ವಿವಾಹ ಮಾಡಿಕೊಳ್ಳುವ ಪದ್ಧತಿಯಿರುವುದು ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಶ್ರೀಮಂತರಾಗಿದ್ದರೆ ಮೊದಲನೆಯ ಹೆಂಡತಿ ತೀರಿದ ಬಳಿಕ ಊರ ಜನರೇ ಒತ್ತಾಯ ಮಾಡಿ ಮದುವೆ ಮಾಡಿದರೆ ಬಡವರಾದವರು ತಮ್ಮಿಚ್ಛೆಯಂತೆ ಮರುಮದುವೆಯಾಗುತ್ತಿದ್ದರು. ಸೀತಾಲಕ್ಷ್ಮಿಯನ್ನು ಸೊಸೆಯನ್ನಾಗಿ ತಂದುಕೊಂಡ ರಂಭಾಪುರಿಯ ಗುಂಡಣ್ಣನವರ ಮನೆಯಲ್ಲಿ ಗುಂಡಣ್ಣನವರಿಗೆ ಮೊದಲನೇಯ ಹೆಂಡತಿ ಸತ್ತು ಮೂವರು ಬೆಳೆದ ಗಂಡು ಮಕ್ಕಳಿದ್ದರೂ ಗುಂಡಣ್ಣನವರು ಎರಡನೇಯ ಮದುವೆಯಾಗಲು ಮುಂದಾಗುತ್ತಾರೆ. ಬಡವರಾಗಿದ್ದ ಗುಂಡಣ್ಣನವರಿಗೆ ಮದುವೆಯಾಗಬೇಕಾದ ಯಾವುದೇ ಅನಿವಾರ್ಯತೆಗಳಿಲ್ಲದ್ದಾಗಲೂ ಕಲ್ಯಾಣಿಯನ್ನು ಮದುವೆ ಮಾಡಿಕೊಳ್ಳುತ್ತಾರೆ. ಇದರಿಂದಾಗಿ ಮೊದಲ ಹೆಂಡತಿಯ ಮಕ್ಕಳಿಗೆ ತಂದೆಯ ಮೇಲೆ ಮತ್ತು ಮಲತಾಯಿಯ ಮೇಲೆ ಸಹಜವಾಗಿಯೇ ದ್ವೇಷವುಂಟಾಯಿತು. ಅವರಿಗೆ ಹುಟ್ಟಿದ ಮಗ ಸುಂದರರಾಜ ಇವನ ಮೇಲೂ ಅವರಿಗೆ ಅಸಹನೆಯಿತ್ತು. ಗುಂಡಣ್ಣನವರ ಈ ಕಾರ್ಯದಿಂದಾಗಿ ಮನೆಯಲ್ಲಿ ಯವಾಗಲೂ ಅಶಾಂತಿ ನೆಲೆಸಿತ್ತು.

'ಹೇಮಾವತಿ' ಕಾದಂಬರಿಯಲ್ಲಿ ರಾಮಣ್ಣ ಪೆರುಮಾಳರು ಆಸ್ತಿವಂತರಾಗಿದ್ದು ತಮ್ಮ ಮೊದಲನೆಯ ಹೆಂಡತಿ ಲಕ್ಷ್ಮಿ ಒಂದು ಮಗುವಿನ ಜನನವಾದ ಎರಡು ವರ್ಷಗಳಿಗೆ ಪ್ಲೇಗ್ ಕಾಯಿಲೆಯಿಂದ ಮರಣ ಹೊಂದುತ್ತಾಳೆ. ಆಗ ಅವರ ಸ್ನೇಹಿತರೇ ಮಗುವಿನ ಪೋಷಣೆಗಾದರೂ

ಮರುವಿವಾಹವಾಗಲು ಪ್ರೇರೆಪಿಸುತ್ತಾರೆ. ಇದರಿಂದ ಪೆರುಮಾಳರು ಎರಡನೇ ಮದುವೆ ಮಾಡಿಕೊಳ್ಳುತ್ತಾರೆ.

'ಊರ್ವಶಿ' ಕಾದಂಬರಿಯಲ್ಲಿ ಸೀತಾಲಕ್ಷ್ಮಿಯ ತಂದೆ ಶಾನುಭೋಗ ರಾಮಣ್ಣನವರು ಸಹ ಮಧ್ಯ ವಯಸ್ಸಿಗೆ ಹೆಂಡತಿಯನ್ನು ಕಳೆದುಕೊಂಡರೂ ಎರಡನೇ ಮದುವೆಯಾಗಲು ಒಪ್ಪುವುದಿಲ್ಲ. ಶಾನುಭೋಗ ರಾಮಣ್ಣನವರು ಬಡವರಾದ್ದರಿಂದ ಎರಡನೇ ಮದುವೆ ಮಾಡಿಕೊಳ್ಳಲು ಹೋಗಲಿಲ್ಲ. ಅದಲ್ಲದೆ ಮೊದಲನೇ ಹೆಂಡತಿಗೆ ಇಬ್ಬರು ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳು ಇದ್ದುದರಿಂದ ಅವರನ್ನು ಸಾಕಿ ಬೆಳೆಸಲು ಮುಂದಾದರು. ಎರಡನೇಯ ಸಂಬಂಧಗಳನ್ನು ಸಾಮಾನ್ಯವಾಗಿ ಬಡಮನೆಗಳಿಂದ ತರಲಾಗುತ್ತಿತ್ತು.

**ದಾಂಪತ್ಯ** : 'ಹೇಮಾವತಿ' ಕಾದಂಬರಿಯಲ್ಲಿ ಹೇಮಾವತಿಯ ತಂದೆ ಗಂಡಿನ ಕಡೆಯವರು ಕೇಳಿದಷ್ಟು ಹಣಕೊಟ್ಟು ಮದುವೆ ಮಾಡಿದರೂ ಹೇಮಾವತಿಯ ದಾಂಪತ್ಯ ಸುಖಮಯವಾಗಿರಲಿಲ್ಲ. ಸುಂದರ ಹೇಮಾವತಿಯನ್ನು ಮದುವೆಯಾಗಲು ಇಷ್ಟವಿಲ್ಲದಿದ್ದರೂ ತಾಯಿಯ ಬಲವಂತಕ್ಕೆ ಕಟ್ಟುಬಿದ್ದು ಅವಳನ್ನು ಒಪ್ಪಿಕೊಳ್ಳುತ್ತಾನೆ.

ಚಿಕ್ಕಂದಿನಿಂದಲೂ ತಾಯಿಯಿಲ್ಲದೆ ಅನಾಥೆಯಾಗಿ ಮಲತಾಯಿಯ ಕಟುನಿಂದನೆಗಳಿಗೆ ಗುರಿಯಾಗಿ ಅನ್ನಾಹಾರವಿಲ್ಲದೆ ಸೊರಗಿದ ಹೇಮಾವತಿ ಗಂಡನ ಮನೆಯಲ್ಲಾದರೂ ಸುಖ ಸಿಗಬಹುದೇನೋ ಎಂದು ಆಶಿಸಿದ್ದು ಸುಳ್ಳಾಯಿತು. ಮದುವೆಯ ಸಂದರ್ಭದಲ್ಲಿನ ಗಂಡನ ಮನೆಯವರ ದುರಾಸೆ ಅವಳನ್ನು ಆತಂಕಕ್ಕೆ ತಳ್ಳಿದರೂ ಗಂಡ ಒಳ್ಳೆಯವನಾಗಿರಬಹುದೆಂದು ಎಣಿಸಿದ್ದಳು. ಮದುವೆಯಾದ ಮೇಲೆ ಗಂಡ ಸುಂದರನು ಹೇಮಾವತಿಯ ಬಗೆಗೆ ಒಂದು ದಿನವೂ ಪ್ರೀತಿ ಆದರಗಳನ್ನು ತೋರಿಸದೆ ಅವಳಿರುವಳೆಂಬ ಇರವನ್ನು ಮರೆತು ತಾಯಿ ಮಗ ಹಣಕ್ಕಾಗಿ ಬಡಿದಾಡುವುದಲ್ಲದೆ ದಿನವೂ ಜಗಳವಾಡುತ್ತಿರುವುದನ್ನು ನೋಡಿದ ಹೇಮಾವತಿಗೆ ಮತ್ತೊಂದು ನರಕದ ದರ್ಶನವಾಯಿತು.

ಹೀಗಾಗಲೇ ಕೆಟ್ಟದಾರಿ ತುಳಿದು ತನಗೆ ಮದುವೆಯೇ ಬೇಡವೆಂದು ಅಲೆಯುತ್ತಿದ್ದ ಮಗನಿಗೆ ಬಲವಂತವಾಗಿ ಹೇಮಾವತಿಯನ್ನು ತಂದು ಮದುವೆ ಮಾಡಿ ಆನಂತರ ಮಗ ತಪ್ಪುದಾರಿ ತುಳಿದು ಹಾಳಾಗುತ್ತಿರುವುದಕ್ಕೆ ತನ್ನ ಸೊಸೆಯೇ ಕಾರಣವೆಂದು ಸೀತಮ್ಮ ದೂರುತ್ತಿದ್ದಳು. ಸುಂದರನ ಮೇಲಿದ್ದ ಕೋಪವನ್ನೆಲ್ಲ ತಾಯಿ ಸೀತಮ್ಮ ಸೊಸೆಯ ಮೇಲೆಯೇ ತೀರಿಸಿಕೊಳ್ಳುತ್ತಿದ್ದಳು. ಮನೆಯಲ್ಲಿ ಏನೇ ಕೆಡುಕುಗಳುಂಟಾದರೂ ಅದಕ್ಕೆ ಹೆಂಗಸರನ್ನೇ ದೂರುವುದು ಸಾಮಾನ್ಯವೆಂಬಂತೆ ಅತ್ತೆ ಹೇಮಾವತಿಯ ಕಾಲಗುಣದಿಂದಲೇ ಇದೆಲ್ಲ ನಡೆಯುತ್ತಿದೆ ಎಂದು ಹಂಗಿಸುತ್ತಿದ್ದಳು.

"ಇವಳು ಮನೆಗೆ ಕಾಲಿಟ್ಟುದೇ ತಡ, ಇದ್ದಬದ್ದದ್ದೆಲ್ಲ ದೋಚಿ ಗುಡಿಸಿ ಹೋಯಿತು. ಕೆಲವು ಪುಣ್ಯಾತ್ಗಿತ್ತಿರು ಮನೆಗೆ ಬಂದರೆ ಲಕ್ಷ್ಮಿ ತುಂಬಿ ಬರುತ್ತೆ ಇಂತಹವರು ಬಂದರೆ ಮನೆ ತೊಳೆದೇ ಹೋಗುತ್ತೆ" (ಪುಟ 134, ಹೇಮಾವತಿ)

ಸುಂದರ ಸೈನ್ಯವನ್ನು ಸೇರಿ ಹೇಮಾವತಿಯನ್ನು ಸಂಪೂರ್ಣವಾಗಿ ತೊರೆದರೂ ಎದೆಗುಂದದೆ ತನಗೊದಗಿದ ದುಸ್ಥಿತಿಯನ್ನು ಹೇಮಾವತಿ ಸಮರ್ಥವಾಗಿ ಎದುರಿಸುತ್ತಾಳೆ.

**International Journal of Academic Research**
**ISSN: 2348-7666; Vol.5, Issue-4, April, 2018**
**Impact Factor: 6.023; Email: drtvramana@yahoo.co.in**

ವಿವಾಹಪೂರ್ವದಲ್ಲಾಗಲೀ ಆನಂತರವಾಗಲೀ ಏನೇ ಸಂಕಷ್ಟಗಳು ಎದುರಾದರೂ ಹೆಣ್ಣು ಪಾವಿತ್ರ್ಯತೆಯನ್ನು ಉಳಿಸಿಕೊಂಡಿರಬೇಕೆಂದು ಸಮಾಜ ಬಯಸುತ್ತದೆ. ಹೇಮಾವತಿ ತನ್ನ ಗಂಡ ತನ್ನ ಬಗೆಗೆ ನಿರಾಸಕ್ತನಾಗಿದ್ದರೂ ಅವನನ್ನು ತನ್ನವನನ್ನಾಗಿ ಮಾಡಿಕೊಳ್ಳಲು ಹಾತೊರೆಯುತ್ತಾಳೆ. ಸುಂದರ ಅವಳಿಂದ ದೂರ ಸರಿದು ಸೈನ್ಯಕ್ಕೆ ಸೇರಿ ಅವಳನ್ನು ಬಿಟ್ಟು ಬಿಡುತ್ತಾನೆ. ಹೇಮಾವತಿ ಗಂಡನಿದ್ದೂ ವಿಧವೆಯ ಬಾಳನ್ನು ನಡೆಸಬೇಕಾಗುತ್ತದೆ. ಎರಡು ವರ್ಷಗಳ ನಂತರ ಹೇಮಾವತಿಯನ್ನು ಹುಡುಕಿಕೊಂಡು ಅಗ್ರಹಾರಕ್ಕೆ ಬಂದ ಸುಂದರ ಅವಳಲ್ಲಿ ಕ್ಷಮೆ ಕೇಳುವ ಬದಲು ಅವಳ ಶೀಲವನ್ನು ಶಂಕಿಸುತ್ತಾನೆ.

"ಹಾಗಾದರೆ ನೀನು ಪತಿವ್ರತೆಯೆ? ನಿನ್ನನ್ನು ಹಾಗೆ ಸುಖವಾಗಿಟ್ಟಿದ್ದವರು ಯಾರು? ಈಗ ನಿನ್ನನ್ನು ಹೇಗೆ ಪರಿಗ್ರಹಿಸಲಿ?" (ಪುಟ 294, ಹೇಮಾವತಿ)

ಸುಂದರನಂತಹ ಗಂಡಸರು ತಾವು ಎಷ್ಟರ ಮಟ್ಟಿಗೆ ಹೆಂಡತಿಗೆ ನಂಬಿಕಸ್ಥರಾಗಿ ಬಾಳುವೆ ನಡೆಸಿದ್ದೇವೆ ಎಂಬುದನ್ನು ಅರಿತುಕೊಳ್ಳದೆ ಹೆಂಡತಿಯ ಶೀಲವನ್ನು ಪ್ರಶ್ನಿಸುವುದು ಸಮಾಜದಲ್ಲಿ ಹೆಣ್ಣಿಗಿರುವ ಕೆಳಮಟ್ಟದ ಸ್ಥಾನವನ್ನು ಸೂಚಿಸುತ್ತದೆ. ಗಂಡಸು ಎಷ್ಟು ಹಾಳಾದರೂ ಚಿಂತೆಯಿಲ್ಲ, ಗಂಡ ಬಿಟ್ಟು ಎಷ್ಟು ವರುಷಗಳಾದರೂ ಚಿಂತೆಯಿಲ್ಲ ಹೆಣ್ಣು ಮಾತ್ರ ಪವಿತ್ರಳಾಗಿಯೇ ಉಳಿದಿರಬೇಕೆಂಬ ಗಂಡಸಿನ ಹಂಬಲ ಮತ್ತು ಹಠಗಳೆರಡು ಇಲ್ಲಿ ಚಿತ್ರಿತವಾಗಿವೆ.

**ಸೀತಾಲಕ್ಷ್ಮಿ** : ಸೀತಾಲಕ್ಷ್ಮಿಯ ಸೌಂದರ್ಯಕ್ಕೆ ಮರುಳಾಗಿ ಸುಂದರರಾಜ ಸೀತಾಲಕ್ಷ್ಮಿಯನ್ನು ಮದುವೆಯಾಗುತ್ತಾನೆ. ತನ್ನ ಹೆಂಡತಿಯ ಸೌಂದರ್ಯ ಹಾಗು ಅವಳ ಪಿಟೀಲು ವಿದ್ಯೆ ಅವನನ್ನು ಮರಳು ಮಾಡುತ್ತದೆ. ಪಿಟೀಲು ವಿದ್ಯೆಯನ್ನು ಸೀತಾಲಕ್ಷ್ಮಿಗೆ ಕಲಿಸಿಕೊಟ್ಟ ಅವಳ ಉಪಾಧ್ಯಾಯಿನಿಯೇ ಅವಳ ವಿದ್ಯೆಯನ್ನು ಕುರಿತು ಹೀಗೆ ಹೇಳುತ್ತಾಳೆ.

"ಗಾನ ಸರಸ್ವತಿ ನಿನ್ನ ಬೆರಳುಗಳಲ್ಲಿ ನರ್ತಿಸುತ್ತಿದ್ದಾಳೆ. ನೀನು ಪಿಟೀಲು ನುಡಿಸುವಾಗ ನನಗೆ ನಾನೇ ಎಲ್ಲಿರುವೆನೆಂಬುದರ ಅರಿವೇ ಇರುವುದಿಲ್ಲ. ರೆಕ್ಕೆ ಕಟ್ಟಿಕೊಂಡು ಯಾವುದೋ ಮೇಲಿನ ಲೋಕಗಳಲ್ಲಿ ವಿಹರಿಸುತ್ತಿರುವೆನೆಂಬ ಭಾವನೆಯುಂಟಾಗುತ್ತದೆ. ಸುಖದ ದಿನಗಳೆಲ್ಲ ಮತ್ತೆ ಜ್ಞಾಪಕಕ್ಕೆ ಬರುತ್ತದೆ. ಅನಿರ್ವಚನೀಯವಾದ ಆನಂದವುಂಟಾಗುತ್ತದೆ. ನಿನ್ನನ್ನು ಯಾವನು ಕೈ ಹಿಡಿಯುತ್ತಾನೆಯೋ ಅವನೇ ಅದೃಷ್ಟಶಾಲಿ" ಎನ್ನುತ್ತಿದ್ದರು. (ಪುಟ 5, ಊರ್ವಶಿ)

ಸೀತಾಲಕ್ಷ್ಮಿಯು ಸಹ ಸುಂದರನನ್ನು ತನ್ನ ದೈವವೆಂದು ಅವನನ್ನು ಸಂತೃಪ್ತಿ ಪಡಿಸುವುದೇ ತನ್ನ ಕರ್ತವ್ಯವೆಂದು ತಿಳಿದು ಅವನಿಗೆ ತನ್ನ ಮನಸ್ಸಿನಲ್ಲಿಯೇ ದೇಗುಲ ನಿರ್ಮಿಸಿ ಪೂಜಿಸುತ್ತಾಳೆ. ಆದರೆ ಸೀತಾಲಕ್ಷ್ಮಿ ತನ್ನಕ್ಕನ ಬಾಣಂತನಕ್ಕೆ ಹೋಗಿ ಅಲ್ಲಿ ಆಕಸ್ಮಿಕ ಘಟನೆಯೆಂಬಂತೆ ಉಂಟಾದ ನರಸಿಂಹನ ಸಂಪರ್ಕದಿಂದ ಅವಳು ತಾಯಿಯಾಗುತ್ತಿರುವಳೆಂಬ ಸುದ್ದಿ ತಿಳಿದ ಸುಂದರ ಹುಚ್ಚನಂತಾಗುತ್ತಾನೆ. ಸೀತಾಲಕ್ಷ್ಮಿ ಆಘಾತಕ್ಕೊಳಗಾಗುತ್ತಾಳೆ. ಸೀತಾಲಕ್ಷ್ಮಿ ಅದರಿಂದ ಹೇಗೆ ಹೊರಬರಬೇಕೆಂದು ತಿಳಿಯದೆ ಮಾನಸಿಕ ಕ್ಷೋಭೆಗೆ ಗುರಿಯಾಗಿ ಇಡೀ ಸಮಾಜದಿಂದ ಕಳಂಕಿನಿಯೆಂಬ ಅಪನಿಂದನೆಗೆ ಗುರಿಯಾಗುತ್ತಾಳೆ. ಒಮ್ಮೆ ಹೆಣ್ಣು ತನ್ನ 'ಹೆಣ್ತನ' ವನ್ನು ಕಳೆದುಕೊಂಡ ಮೇಲೆ ಅವಳು ತವರು ಮನೆಯಲ್ಲಾಗಲೀ, ಗಂಡನ ಮನೆಯಲ್ಲಾಗಲೀ ಜೀವಿಸಲು ಅರ್ಹಳಲ್ಲ ಎಂದು ತಿಳಿದಿದ್ದ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸೀತಾಲಕ್ಷ್ಮಿ ಹೋರಾಡುತ್ತಾಳೆ.

"ಒಮ್ಮೆ ಊರಿನ ಆರಾಧ್ಯ ದೇವತೆಯೆನಿಸಿ ತೌರು ಮನೆಗೂ ಅತ್ತೆಯ ಮನೆಗೂ ಬೇಕಾದ ಸೀತಾಲಕ್ಷ್ಮಿ ಇದ್ದಕಿದ್ದಂತೆ ಯಾರಿಗೂ ಬೇಡವಾದಳು. ಹಿರಿಯ ಅಣ್ಣ ರಾಮಸ್ವಾಮಿಗೆ ಆಕೆ ಅಪಶಕುನ, ಕಿರಿಯಣ್ಣನಿಗೆ ಅವಳ ಚಿನ್ನದ ಡಾಬು ಸುಂದರರಾಜನಿಗೆ ಸಂದಾಗ ಆಕೆ ಯಾರ ಮಾತನ್ನೂ ಕೇಳದ ಹೆಣ್ಣು. ಶ್ರೀರಂಗಮ್ಮನಿಗೆ ಆಕೆ ಮನೆ ಮುರುಕಿ, ಮೂಳಿ, ಹಾದರಗಿತ್ತಿ; ಅನಿಷ್ಟ, ಮಹಾಲಕ್ಷ್ಮಿಗೂ ಅಷ್ಟೆಯೇ, ಕೃಷ್ಣನಿಗಂತೂ ಆಕೆ ನಾಯಿ ಮುಟ್ಟಿದ ಗಡಿಗೆ, ಬಿಸುಡತಕ್ಕವಳು, ಆದರೆ ಅವನು ಸೀತಾಲಕ್ಷ್ಮಿ ತಮ್ಮನ ಹೆಂಡತಿಯೆಂಬುದನ್ನು ಗಮನಕ್ಕೆ ತೆಗೆದುಕೊಳ್ಳದೆ ನರಸಿಂಹನನ್ನು ತೃಪ್ತಿಪಡಿಸಿದವಳು, ನನಗೇಕೆ ಸೇವೆ ಸಲ್ಲಿಸಬಾರದು ಎಂದು ಆಸೆಪಟ್ಟನು. ಸೀತಾಲಕ್ಷ್ಮಿ ಸೇರಿದ ಮನೆ ಸಾಮರಸ್ಯವಿಲ್ಲದ್ದು, ಪಿತ್ರಾರ್ಜಿತ ಆಸ್ತಿಯನ್ನು ಅವಲಂಬಿಸಿದ್ದ ಮನೆಯ ಯಜಮಾನ ಗುಂಡಣ್ಣನವರು ಮೂರು ಜನ ಗಂಡು ಮಕ್ಕಳ ತಂದೆಯಾಗಿದ್ದು ಎರಡನೆಯ ಮದುವೆಯಿಂದ ದುರ್ಬಲರಾಗಿದ್ದರು. ಅವರ ಎರಡನೆಯ ಹೆಂಡತಿ ಕಲ್ಯಾಣಮ್ಮನಿಗೆ ಮನೆಯಲ್ಲಿ ಸರಿಯಾದ ಸ್ಥಾನವಿರಲಿಲ್ಲ. ನಿರುದ್ಯೋಗಿಯಾದ ಸುಂದರರಾಜನ ಮಾತನ್ನಂತೂ ಹೇಳಬೇಕಾಗಿರಲಿಲ್ಲ. ಹೀಗಿರುವಲ್ಲಿ ಜಾರಿದ ಸೀತಾಲಕ್ಷ್ಮಿಯನ್ನು ಮೇಲಕ್ಕೆ ಎತ್ತುವುದೆಂತು? ಹಿರಿಯರೂ ಭೀರೂಗಳೂ ಆದ ಗುಂಡಣ್ಣನವರಿಗೇನೋ ಸೊಸೆಯ ವಿಷಯದಲ್ಲಿ ಕನಿಕರ ಮತ್ತು ಸಹಾನುಭೂತಿ, ಕಲ್ಯಾಣಮ್ಮನಿಗೂ ಅಷ್ಟೆ, ಸುಂದರರಾಜನಿಗೆ ನರಸಿಂಹನ ಮೇಲೆ ದ್ವೇಷ; ಸೀತಾಲಕ್ಷ್ಮಿಯ ಮೇಲೆ ಆಸೆ. ಆದರೆ ಸಮಾಜದ ನಿರ್ಬಂಧಗಳು ಅವಳ ಸ್ವೀಕಾರಕ್ಕೆ ಅಡಿ ಬಂದವು. ಸೀತಾಲಕ್ಷ್ಮಿಯ ಸೇವೆ ಎಲ್ಲರಿಗೂ ಬೇಕು; ಅವಳ ಸೌಖ್ಯ ಯಾರಿಗೂ ಬೇಡ. (ಪುಟ 110, 'ಊರ್ವಶಿ', ಗೊರೂರು ಗೌರವ ಗ್ರಂಥ)

ಸೀತಾಲಕ್ಷ್ಮಿ ಸಮಾಜದಿಂದ ತಿರಸ್ಕೃತಳಾದರೂ ಧೈರ್ಯಗೆಡಲಿಲ್ಲ. ಇಂತಹ ಸಂದರ್ಭದಲ್ಲಿ ಹೆಣ್ಣು ಬದುಕುವುದಕ್ಕೆ ಯೋಗ್ಯಳೇ ಅಲ್ಲ ಎಂದು ಸಮಾಜ ಕೂಗಿ ಕೂಗಿ ಹೇಳಿದರೂ ಬದುಕುವ ಸಾಹಸಕ್ಕೆ ಸೀತಾಲಕ್ಷ್ಮಿ ಮುಂದಾಗುತ್ತಾಳೆ.

"ಗಂಡನ ಆಸಡ್ಡೆ, ಅತ್ತೆ ಮಾವಂದಿರ ದೌರ್ಬಲ್ಯ, ಕೃಷ್ಣನ ಆಸೆ, ಶ್ರೀರಂಗಮ್ಮನ ಹೂಂಕಾರ, ಸಮಾಜದ ತಿರಸ್ಕಾರ – ಈ ಪಂಚಾಗ್ನಿಗಳ ನಡುವಿದ್ದು ತನ್ನ ಉದ್ಧಾರವನ್ನು ಕಂಡುಕೊಂಡವಳು ಸೀತಾಲಕ್ಷ್ಮಿ. ಅಣ್ಣ ತಮ್ಮಂದಿರಲ್ಲಿ ವಿರಸ ಮೂಡಿದಾಗ, ಕಳ್ಳತನದ ಅಪವಾದ ಹೊತ್ತಾಗ, ಆತ್ಮಹತ್ಯೆಗೆ ಪ್ರಯತ್ನಿಸಿ ಗುಂಡಣ್ಣನವರಿಂದ ಬದುಕಿದಾಗ ಯಾವುದೋ ಒಳ್ಳೆಯದಕ್ಕೆ ದೈವ ತನ್ನನ್ನು ಉಳಿಸಿದೆಯೆಂದು ಆಕೆ ನಂಬಿದಳು. ಸೀತಾಲಕ್ಷ್ಮಿ ತಾನು ಮಾಡಿದ ತಪ್ಪಿನ ಅರಿವು ಇರದಿರಲಿಲ್ಲ. ಹಾಗಾದರೆ ನರಸಿಂಹನೇಕೆ ನಿರ್ದೋಷಿಯಾಗಬೇಕು? ಅವನ ತಪ್ಪಿಗೆ ಶಿಕ್ಷೆ ಬೇಡವೇ ಇದು ಅವಳ ಯೋಚನೆ, ಪ್ರಶ್ನೆ. ಇದಕ್ಕೆ ಸಮಾಜವೇ ಉತ್ತರವನ್ನು ಹೇಳಬೇಕು. ತಾಳ್ಮೆ, ಮೌನ , ತ್ಯಾಗಗಳು ಸೀತಾಲಕ್ಷ್ಮಿಯ ಬಾಳಿನುದ್ದಕ್ಕೂ ಆಕೆಗೆ ನೆರವು ನೀಡಿದವೆಂಬುದನ್ನು ಇಲ್ಲಿ ನೆನೆಯಬೇಕು. (ಅದೇ ಪುಟ 110, 'ಊರ್ವಶಿ', ಗೊರೂರು ಗೌರವ ಗ್ರಂಥ)

ಸೀತಾಲಕ್ಷ್ಮಿಯ ನಿರ್ದೋಷಿತನವನ್ನು ಅರಿತಿದ್ದ ಕಮಲಮ್ಮ ತಾನು ವಿಧವೆಯಾಗಿ ಈ ಸಮಾಜದಲ್ಲಿ ಒಂಟಿಯಾಗಿ ಬಾಳುತ್ತಿರುವ ಅವರು ಸೀತಾಲಕ್ಷ್ಮಿಗೆ ಬೆಂಗಾವಲಾಗಿ ನಿಂತು ಅವಳಲ್ಲಿ ಬದುಕುವ ಭರವಸೆಯನ್ನು ಹೆಚ್ಚಿಸುತ್ತಾರೆ. ನಗರದಲ್ಲಿ ಸೀತಾಲಕ್ಷ್ಮಿಯ ಪಿಟೀಲುವಿದ್ಯೆಯನ್ನು ಆಲಿಸಿದ ಜನ ಅವಳ ಮಂಗಳನಾಮವೇನೆಂದು ಕೇಳಿದಾಗ ಅವಳಿಗೆ ದುಃಖವೇ ಒತ್ತರಿಸಿ ಬರುತ್ತದೆ. ತನ್ನೊಂದು ಸಂಗೀತವಿದ್ಯೆಗೆ ಇಷ್ಟೊಂದು ಬೆಲೆಯಿರುವುದು ಅದು ತನ್ನನ್ನು ಉನ್ನತ ಸ್ಥಾನಕ್ಕೇರಿಸಿರುವುದು ಅವಳಲ್ಲಿ ದುಃಖ ಮತ್ತು ಆನಂದಗಳನ್ನು ಒಮ್ಮೆಲೆ ಉಂಟುಮಾಡುತ್ತದೆ.

"ಸೀತಾಲಕ್ಷ್ಮಿಯ ಮನಸ್ಸು ಅಂದಿನ ಸಂಗತಿಗಳನ್ನೆಲ್ಲ ನೆನೆಯಿತು. ಮಂಗಳನಾಮ! ಆಹಾ! ಎಂತಹ ವಿಕೃತ ಹಾಸ್ಯ. ನನ್ನ ಚರಿತ್ರೆ ತಿಳಿದಿದ್ದರೆ ಇವರು ಹೀಗೆ ಎಂದೂ ಹೇಳುತ್ತಿರಲಿಲ್ಲ!" ರಂಡೆ ಎನ್ನದೆ ಹಳ್ಳಿಯಲ್ಲಿ ಆಕೆಗೆ ಬೇರೆ ಹೆಸರಿಲ್ಲ. ಶ್ರೀರಂಗಮ್ಮ ಅವಳನ್ನು ಮೂಳಿ ಎಂದು ಕರೆಯುತ್ತಿದ್ದಳು. ಅವಳ ಅಕ್ಕ ಅವಳನ್ನು ಮೂದೇವಿ ಎನ್ನುತ್ತಿದ್ದಳು . ಅಣ್ಣ ರಾಮ ಬ್ರಹ್ಮೇತಿ ಎನ್ನುತ್ತಿದ್ದ. ಶ್ರೀನಿವಾಸ ಪ್ರಾರಬ್ಧ ಎನ್ನುತ್ತಿದ್ದ. ಗುಂಡಣ್ಣನವರು ಕೋಪದಲ್ಲಿದ್ದಾಗ ಆ ಶನಿಕಾಟ ಎನ್ನುತ್ತಿದ್ದರು. ಶಾಂತರಾಗಿದ್ದಾಗ "ಅದು" ಎನ್ನುತ್ತಿದ್ದರು. ಮಂಗಳನಾಮ! ಸೀತಾಲಕ್ಷ್ಮಿಗೆ ಮತ್ತೆ ಅಳು ಬಂತು. (ಪುಟ 233, ಊರ್ವಶಿ)

ಅವಳಿಗೆ ನಗರದಲ್ಲಿ ಗೌರವಸ್ಥಾನ ದೊರೆತರೂ ಅದಕ್ಕಾಗಿ ಹಂಬಲಿಸದೆ ತನ್ನ ತವರುಮನೆ ಮತ್ತು ಗಂಡನಮನೆಗಳಲ್ಲಿದ್ದುಕೊಂಡು ಅವರ ಮನವನ್ನು ಗೆಲ್ಲಲು ಹಂಬಲಿಸುತ್ತಾಳೆ. ತಾನು ಕಲಿತ ವೈದ್ಯ ವಿದ್ಯೆಯನ್ನು ಊರ ಜನರಿಗೆ ಹಾಗು ರೋಗಗ್ರಸ್ಥನಾದ ತನ್ನ ಗಂಡನಿಗೆ ಧಾರೆಯರೆಯುವ ಮೂಲಕ ಮತ್ತೆ ಅವನನ್ನು ಸೇರುತ್ತಾಳೆ. ಗಂಡನೊಂದಿಗೆ ಆಶ್ರಮ ಸೇರಿ ತನ್ನ ಇಡೀ ಜೀವನವನ್ನು ಸೇವೆಯಲ್ಲಿ ಕಳೆಯುತ್ತಾಳೆ.

## ಪರಾಮರ್ಶನ ಗ್ರಂಥಗಳು

01. **ಹೇಮಾವತಿ,** ಗೊರೂರು ರಾಮಸ್ವಾಮಿ ಅಯ್ಯಂಗಾರ್, 1982, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು

02. **ಊರ್ವಶಿ,** ಗೊರೂರು ರಾಮಸ್ವಾಮಿ ಅಯ್ಯಂಗಾರ್, 1982, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು

03. **ಗೊರೂರರ ಕೃತಿಗಳು ಒಂದು ಸಾಂಸ್ಕೃತಿಕ ಅಧ್ಯಯನ,** ಶಿವರಾಮೇಗೌಡ ನಾಗವಾರ, 1978, ಸಹ್ಯಾದ್ರಿ ಪ್ರಕಾಶನ

04. **ಗೊರೂರು ಗೌರವ ಗ್ರಂಥ,** ನಾಯಕ ಹಾ.ಮ (ಸಂ) 1973, ಗೊರೂರು ಗೆಳೆಯರ ಬಳಗದ ಪ್ರಕಟಣೆ, ಮೈಸೂರು

05. **ಗೊರೂರು ಜೀವನ ಮತ್ತು ಸಾಧನೆ,** ಬೆಂಕಟಯ್ಯ, ಸಿ.ಜಿ.1994, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

06. **ಗೊರೂರು ರಾಮಸ್ವಾಮಿ ಅಯ್ಯಂಗಾರ್,** ಪ್ರಧಾನ್ ಗುರುದತ್ತ, 2006, ನವಕರ್ನಾಟಕ ಪ್ರಕಾಶನ, ಬೆಂಗಳೂರು

07. **ಹೇಮಾವತಿಯ ಚೇತನಾ,** ಕಮಲಾನರಸಿಂಹ (ಸಂ), 2005, ಸುಮುಖ ಪ್ರಕಾಶನ, ಬೆಂಗಳೂರು

08. **ಗೊರೂರು ರಾಮಸ್ವಾಮಿ ಅಯ್ಯಂಗಾರ್,** ರಮೇಶ್ ಬೆ.ಗೋ., 2003, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು